ಮೂಲ ದಾವಾ ಸಂಖ್ಯೆ. 4/2023 ಡಿ ಡಬ್ಲ್ಯೂ 7

(ದಿನಾಂಕ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಹೆಚ್ ವಕೀಲರಿಂದಃ-

ನನಗೆ ಈಗ 70 ವರ್ಷ ವಯಸ್ಸು ಇರುತ್ತದೆ. ದಾವಾಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವಾಸ್ತಿ ನಂ.375 ಇರಬಹುದು ಆದರೆ ನನಗೆ ಸರಿಯಾಗಿ ನೆನಪಿಲ್ಲ. ದಾವಾಸ್ತಿಯ ವಿಸ್ತೀರ್ಣ 30 )( 40 ಅಡಿ ಇರುತ್ತದೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ಕಸ್ತೂರಮ್ಮ ನನಗೆ ಸಂಬಂಧದಿಂದ ಅಕ್ಕನಾಗಬೇಕು. ದಾವಾಸ್ತಿ ಮೂಲತಃ ರಾಮಪ್ಪ ಇವರಿಗೆ ಸೇರಿತ್ತು. ರಾಮಪ್ಪ ಮತ್ತು ವಾದಿಯ ನಡುವೆ ಏನು ಸಂಬಂಧ ಇದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ರಮೇಶ್ ಇವರು ರಾಮಪ್ಪ ಇವರಿಂದ ಖರೀದಿಸಿದ್ದಾರೆ. ಆ ಖರೀದಿ ಪತ್ರವನ್ನು ನಾನು ನೋಡಿಲ್ಲ. ಈ ದಾವೆ ಮತ್ತು ದಾವಾಸ್ತಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹಾ ಪ್ರತಿವಾದಿ ನಂ.1 ನನ್ನ ಸಹೋದರಿಯಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ